ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2014-15ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ 2013-14ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ರಾಜ್ಯ ಸಹಾಯಧನ ಪಾವತಿಸಲು ಅನಿಲ ಯೋಜನೆಯಡಿ ಅನುದಾನ ಬಿಡುಗಡೆ ಮಾಡುವ – ಕುರಿತು.

ಪ್ರಸ್ತಾವನೆ :

2014-15ನೇ ಸಾಲಿನ ರಾಜ್ಯ ಆಯವ್ಯಯದ ಲೆಕ್ಕ ಶೀರ್ಷಿಕೆ 2810-01-198-1-01-(Lumpsum) ರಡಿಯಲ್ಲಿ ರೂ.120.00 ಲಕ್ಷಗಳನ್ನು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿಯ ಯೋಜನೆಯಲ್ಲಿ ನಿರ್ಮಿಸಲಾದ ಜೈವಾನಿಲ ಘಟಕಗಳಿಗೆ **ರಾಜ್ಯ ಅನಿಲ ಯೋಜನೆಯಡಿ** ಬಾಕಿ ರಾಜ್ಯ ಸಹಾಯಧನ ಪಾವತಿಸಲು ನಿಗದಿಪಡಿಸಲಾಗಿದೆ. ಇದರನ್ವಯ 2013-14ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ರಾಜ್ಯ ಸಹಾಯಧನವನ್ನು ಬಿಡುಗಡೆ ಮಾಡಬೇಕಾಗಿದ್ದು, 2013-14ನೇ ಸಾಲಿನಲ್ಲಿ ಪ್ರಗತಿ ಸಾಧಿಸಿದ ಜಿಲ್ಲಾ ಪಂಚಾಯಿತಿಗಳಿಗೆ ಬಾಕಿ ಇರುವ ಅನುದಾನವನ್ನು, ಲಭ್ಯವಿರುವ ಅನುದಾನಕ್ಕೆ ಮಿತಿಗೊಳಪಟ್ಟು ಬೆಳಗಾವಿ, ದಕ್ಷಿಣಕನ್ನಡ, ಶಿವಮೊಗ್ಗ ಮತ್ತು ಉಡುಪಿ ಜಿಲ್ಲಾ ಪಂಚಾಯತ್‌ಗಳಿಗೆ ಕೆಲವೊಂದು ಷರತ್ತು ಮತ್ತು ನಿಬಂಧನೆಗೊಳಪಟ್ಟು ರಾಜ್ಯ ಸಹಾಯಧನ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 63 ಜೈಅಯೋ 2014, ಬೆಂಗಳೂರು ದಿನಾಂಕ : 30.09.2014**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ 2014-15ನೇ ಸಾಲಿನಲ್ಲಿ, ಈ ಹಿಂದೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ರಾಜ್ಯ ಸಹಾಯಧನ ಪಾವತಿಸಲು **ರೂ.60.00 ಲಕ್ಷಗಳನ್ನು (ರೂ. ಅರವತ್ತು ಲಕ್ಷಗಳು ಮಾತ್ರ) ಅನಿಲ ಯೋಜನೆಯಡಿಯಲ್ಲಿ ಮೊದಲನೇ ಕಂತಾಗಿ ಲೆಕ್ಕ ಶೀರ್ಷಿಕೆ 2810-01-198-1-01 (Lumpsum)** ರಡಿ ಈ ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಿದ ಅನುದಾನ |
|---|---|---|
| 01 | ಬೆಳಗಾವಿ | 28.00 |
| 02 | ದಕ್ಷಿಣ ಕನ್ನಡ | 07.00 |
| 03 | ಶಿವಮೊಗ್ಗ | 13.00 |
| 04 | ಉಡುಪಿ | 12.00 |
| | ಒಟ್ಟು | **60.00** |

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡತಕ್ಕದಲ್ಲ.

ಈ ಆದೇಶ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಗ್ರಾಅಪ 563 ಆಂ.ಆ.ಸ 2014 ದಿನಾಂಕ 20.09.2014ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಷರತ್ತು ಮತ್ತು ನಿಬಂಧನೆಗಳು :

1. ಈ ಯೋಜನೆಯ ಮಾರ್ಗಸೂಚಿಯನ್ವಯ ಪ್ರತಿ ಜಿಲ್ಲೆಯ ಪ್ರತಿಯೊಂದು ಅನಿಲ ಸ್ಥಾವರದ ಜಿ.ಪಿ.ಎಸ್., ಫೋಟೋ, ಫಲಾನುಭವಿಗಳ ಫೋಟೋ, ಫಲಾನುಭವಿಗಳ ವಿವರಗಳನ್ನು ದಾಖಲಾತಿ ರಿಜಿಸ್ಟರ್‌ನಲ್ಲಿ ದಾಖಲಿಸುವುದು.
2. ಪ್ರತಿಯೊಂದು ಅನಿಲಸ್ಥಾವರ ಘಟಕಕ್ಕೆ ಸಂಬಂಧಪಟ್ಟಂತೆ, ಪ್ರತ್ಯೇಕ ಫಲಾನುಭವಿಯ ಕಡತ ನಿರ್ವಹಿಸತಕ್ಕದ್ದು.
3. ಪ್ರತಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಫಲಾನುಭವಿಗಳ ವಿವರ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳನ್ನು ಕಡ್ಡಾಯವಾಗಿ ಮಂಡಿಸುವುದು. ಪಂಚತಂತ್ರ ವರ್ಕ್ ಸಾಫ್ಟ್‌ದಲ್ಲಿ ಅಳವಡಿಸುವುದು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರ ಹಂತದಲ್ಲಿ ಶೇ. 50%ರಷ್ಟು ಉಪ ಕಾರ್ಯದರ್ಶಿ, ಮುಖ್ಯ ಲೆಕ್ಕಾಧಿಕಾರಿ ಹಾಗೂ ಮುಖ್ಯ ಯೋಜನಾಧಿಕಾರಿ ಜಿಲ್ಲಾ ಪಂಚಾಯತ್‌ರವರ ಹಂತದಲ್ಲಿ ತಲಾ ಶೇ.15%ರಷ್ಟು (ಒಟ್ಟು ಶೇ.45%ರಷ್ಟು) ಕಡ್ಡಾಯವಾಗಿ ಪರಿವೀಕ್ಷಣೆ (Inspection) ಮಾಡುವುದು.
5. ತಾಲ್ಲೂಕು ಪಂಚಾಯತ್ ಅಧಿಕಾರಿಗಳ ಹಂತದಲ್ಲಿ ಶೇ. 25%ರಷ್ಟು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹಂತದಲ್ಲಿ ಶೇ.25% ರಷ್ಟು ಕಡ್ಡಾಯವಾಗಿ ಪರಿವೀಕ್ಷಣೆ (Inspection) ಮಾಡುವುದು.
6. ಈ ಮೇಲಿನ ಹಂತದಲ್ಲಿ ಪರಿವೀಕ್ಷಣೆ ಮಾಡಲಾದ ವಿವರಗಳನ್ನು ಒಂದು ಸವಿವರವಾದ ಟಿಪ್ಪಣಿಯೊಂದಿಗೆ ನಿರ್ದೇಶಕರು, ಗ್ರಾಮೂಸೌ-2 ಕೋಶ ರವರಿಗೆ ಸಲ್ಲಿಸತಕ್ಕದ್ದು.
7. ಯೋಜನೆಯ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಹಾಗೂ ಇದರ ಪಾಲನೆಯ ಸಂಪೂರ್ಣ ಜವಾಬ್ದಾರಿಯನ್ನು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್ ರವರು ಮಾಡತಕ್ಕದ್ದು.
8. ಪ್ರತಿ ಮಾಹೆ 5ನೇ ದಿನಾಂಕದೊಳಗೆ ಪ್ರಗತಿ ವರದಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆ
3. ಜಿಲ್ಲಾ ಖಜಾನಾಧಿಕಾರಿಗಳು, ಬೆಳಗಾವಿ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆ
4. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.